# ವಾರ್ತಾ ವಿಶ್ಲೇಷಣೆ

*(ನಾವು ಪ್ರತಿದಿನ ವಿವಿಧ ಪತ್ರಿಕೆಗಳನ್ನು ಓದುವಾಗ ಕೆಲವು ಸಂಗತಿಗಳು ನಮ್ಮ ಗಮನ ಸೆಳೆಯುತ್ತವೆ. ಅವನ್ನು ನಾವು ಗಮನವಿಟ್ಟು ಓದುತ್ತೇವೆ; ನಮ್ಮ ಸ್ನೇಹಿತರಿಗೂ ಓದಿ ಹೇಳುತ್ತೇವೆ; ಅವುಗಳ ಬಗ್ಗೆ ವಿಚಾರ ಮಾಡುತ್ತೇವೆ. ಅದನ್ನೇ ನಾವೂ ಇಲ್ಲಿ ಮಾಡುತ್ತಿದ್ದೇವೆ. ಇಲ್ಲಿ ಕೊಟ್ಟಿರುವ ಮಾಹಿತಿಗಳು ಹಲವು ಪತ್ರಿಕೆಗಳಿಂದ ತೆಗೆದುಕೊಂಡವು. ಹಲವು ಹೂವುಗಳಿಂದ ಸಂಗ್ರಹಿಸಿದ ಮಕರಂದ ಸೇರಿ ತಾನೇ ಜೇನಾಗುವುದು? –ಸಂ.)*

**ಹಿಂದೂ ಪದ ಪಾರ್ಸಿಗಳದ್ದೇ?:** ೧೮೦೬ ರಲ್ಲಿ 'ಭಾರತಿ' ಎಂಬ ಬಂಗಾಳಿ ಭಾಷೆಯ ಪತ್ರಿಕೆಯಲ್ಲಿ ಶ್ರೀಮತಿ ಸರಳಾದೇವಿ ಅವರು 'ಹಿಂದೂ ಮತ್ತು ನಿಗರ' ಎಂಬ ಲೇಖನದಲ್ಲಿ 'ಹಿಂದೂ' ಪದವು ನಾವು ತಿಳಿದುಕೊಂಡಿರುವಂತೆ, 'ಸಿಂಧೂ' ಪದದಿಂದ ಬಂದಿದ್ದಲ್ಲ ಎಂದು ಬರೆದಿದ್ದಾರಂತೆ. ಅವರ ಪ್ರಕಾರ, ಪಾರ್ಸಿಗಳ ಪುಣ್ಯಗ್ರಂಥ 'ಝೆಂದ್ ಅವೆಸ್ತಾ' ವೇದಕಾಲದಲ್ಲಿಯೇ ರಚನೆಯಾಗಿದ್ದು, ಅದಕ್ಕೂ ವೇದಗಳಿಗೂ ಸಮಾನ ಅಂಶಗಳಿವೆ. ಮೊದಲ ಬಾರಿಗೆ 'ಹಿಂದೂ' ಪದವನ್ನು ಅಲ್ಲಿ ಕಾಣಬಹುದು. ಇನ್ನೊಂದು ಸ್ವಾರಸ್ಯವೆಂದರೆ, ಪಾರ್ಸಿಗಳೂ ನಮ್ಮ ವೇದಕಾಲೀನ ಜನರಂತೆ ಅಗ್ನಿ ಉಪಾಸಕರು. **'ಹಿಂದೂ' ಪದವು ಗ್ರೀಕರಿಂದ ಅಥವಾ ಅರಬರಿಂದ ಬಂದಿದ್ದಲ್ಲ, ಅದು ವೇದ ಸಂಸ್ಕೃತಿಯ ತದ್ರೂಪವೇ ಆಗಿರುವ ಪಾರ್ಸಿ ಜನಾಂಗದ ಪುಣ್ಯ ಗ್ರಂಥದಿಂದ ಬಂದಿದ್ದು ಎನ್ನುವುದು ಮನಸ್ಸಿಗೆ ಸ್ವಲ್ಪ ಮುದ ಕೊಡುವುದು ಅಲ್ಲವೆ? ('ಕಸ್ತೂರಿ' ಪತ್ರಿಕೆ, ಜನವರಿ ೨೦೦೮)**

**ಕವಲುದಾರಿಯಲ್ಲಿರುವ ವೈದ್ಯಕೀಯ ಸೇವೆ:** ಪುಸ್ತಕದ ಹೆಸರು: **ಆಕ್ಸ್‌ಫರ್ಡ್ ಟೆಕ್ಸ್ಟ್‌ಬುಕ್ ಆಫ್ ಮೆಡಿಸಿನ್.** ಅದರಲ್ಲಿ ಎರಡು ಲೇಖನಗಳು ಉಲ್ಲೇಖಾರ್ಹ. ಮೊದಲ ಲೇಖನದ ಹೆಸರು: 'ಅನ್ಯಾಯದ ಜಗತ್ತಿನಲ್ಲಿ ವೈದ್ಯಕೀಯ ಸೇವೆ.' ಎಂ.ಹೆಚ್. ಕಿಂಗ್ ಎನ್ನುವವರು ಈ ಲೇಖನದಲ್ಲಿ ಬಡ ದೇಶಗಳು ಮತ್ತು ಶ್ರೀಮಂತ ದೇಶಗಳಲ್ಲಿ ಕಂಡುಬರುವ **ಖಾಯಿಲೆಗಳ ಬಗೆಗಳು ಮತ್ತು ಲಭ್ಯವಿರುವ ವೈದ್ಯಕೀಯ ಸೇವೆಗಳಲ್ಲಿ** ಕಂಡುಬರುವ ವೈಪರೀತ್ಯದ ಬಗ್ಗೆ ಬರೆದಿದ್ದಾರೆ. ಅಭಿವೃದ್ಧಿಶೀಲ ದೇಶಗಳು ವೈದ್ಯಕೀಯ ಸೇವೆಗಳಲ್ಲಿ ಅಮೆರಿಕೆಯ ಮಾದರಿಯನ್ನು ಅನುಸರಿಸುತ್ತಿರುವುದನ್ನು ಈ ಲೇಖನ ಕಟುವಾಗಿ ನಿಂದಿಸುತ್ತದೆ. ಅಭಿವೃದ್ಧಿಶೀಲ ದೇಶಗಳು ಪ್ರಾದೇಶಿಕ ಆವಶ್ಯಕತೆಗಳಿಗೆ ಅನುಸಾರವಾಗಿ ಕಡಮೆ ವೆಚ್ಚದ, ಪ್ರಭಾವಶಾಲಿಯಾದ, ಬಡಜನರು ಕೂಡ ಪಡೆಯಬಹುದಾದ ವೈದ್ಯಕೀಯ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೆ ಈ ಲೇಖನವು ಒತ್ತುನೀಡುತ್ತದೆ.

ಎರಡನೆಯ ಲೇಖನದ ಹೆಸರು: **ದೇವರುಗಳ ವ್ಯಾಧಿಗಳು: ಆರೋಗ್ಯಕ್ಕೆ ಕೆಲವು ನೂತನ ಧಕ್ಕೆಗಳು** ಎಂದು. ಇದು ಕೈಗಾರಿಕಾ ಪ್ರಧಾನವಾದ ಹಣಕಾಸು ವ್ಯವಸ್ಥೆಯ ತೀವ್ರ ಅನೈತಿಕ ಪರಿಣಾಮಗಳ ಬಗ್ಗೆ ನಮ್ಮನ್ನು ಎಚ್ಚರಿಸುತ್ತದೆ. ಈ ಬಗೆಯ ಹಣಕಾಸು ವ್ಯವಸ್ಥೆ ಜಾಗತಿಕ ವಾತಾವರಣವನ್ನು ಕೇವಲ ಸಂಪನ್ಮೂಲಗಳನ್ನು ಎಂದೆಂದಿಗೂ ಒಂಡಬಲ್ಲ ಆಕರದಂತೆಯೂ, ಕಲುಷಿತ ಪದಾರ್ಥಗಳನ್ನು ಎಂದೆಂದಿಗೂ ಸುರಿಯಬಲ್ಲ ಕಸದ ತೊಟ್ಟಿಯಂತೆಯೂ ಪರಿಗಣಿಸಿರುವುದನ್ನು ಈ ಲೇಖನ ನಿಂದಿಸುತ್ತದೆ. ನಾವು ಬಳಲುತ್ತಿರುವ ಆಧುನಿಕ(?) ವ್ಯಾಧಿಗಳಿಗೆ ನಮ್ಮ ಜೀವನಶೈಲಿಯೇ ಕಾರಣ ಎಂದು ಅದು ಹೇಳುತ್ತದೆ. ಮುಂದಿನ ದಿನಗಳಲ್ಲಿ ಮಾನಸಿಕ ವ್ಯಾಧಿಗಳು ಹೆಚ್ಚಾಗಬಹುದು ಎಂದು ಎಚ್ಚರಿಸುತ್ತದೆ.

ವೈದ್ಯಕೀಯ ಶಿಕ್ಷಣದ ಅಧಿಕೃತ ಪಠ್ಯಪುಸ್ತಕದಲ್ಲಿರುವ ಈ ಲೇಖನಗಳು ಇಂದಿನ ವೈದ್ಯಕೀಯ ಸೇವಾವ್ಯವಸ್ಥೆಗೆ ಹಿಡಿದ ಕೈಗನ್ನಡಿಗಳ ಹಾಗಿವೆ. **ಈಗಲಾದರೂ ತಾಂತ್ರಿಕತೆ ಮತ್ತು ವಾಣಿಜ್ಯ ಮನೋಭಾವಗಳೇ ಪ್ರಮುಖವಾಗಿರುವ ವೈದ್ಯಕೀಯ ಸಂಸ್ಥೆಗಳು ಎಚ್ಚೆತ್ತುಕೊಳ್ಳುತ್ತವೆಯೇ? ('ಪ್ರಬುದ್ಧ ಭಾರತ', ಡಿಸೆಂಬರ್, ೨೦೦೭)**

**ಮೀಮಾಂಸಾಶಾಸ್ತ್ರ ಇಂದೂ ಪ್ರಸ್ತುತ:** ಒಂದು ಪದಕ್ಕೆ ಹಲವು ಅರ್ಥಗಳಿವೆ. ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಅವುಗಳಲ್ಲಿ ಯಾವುದನ್ನು ತೆಗೆದುಕೊಳ್ಳುವುದು, ಯಾವುದನ್ನು ಬಿಡುವುದು? – ಈ ಬಗೆಯ ಸಮಸ್ಯೆಯೊಂದು ಸುಪ್ರೀಂ ಕೋರ್ಟಿನ ಮುಂದೆ ಬಂತು. ಪ್ರಾಣಿಗಳಿಂದ ನಡೆಸುವ ವಾಹನವೊಂದು ಕೃಷಿ ಉಪಕರಣವಾಗಬಲ್ಲುದೇ ಎಂಬುದೇ ವ್ಯಾಜ್ಯದ ಹಿಂದಿದ್ದ ಪ್ರಶ್ನೆ.

ಮೀಮಾಂಸಾಶಾಸ್ತ್ರದ ತತ್ತ್ವಗಳ ಪ್ರಕಾರ, ಒಂದು ಪದದ ರೂಢ್ಯರ್ಥ ಪ್ರಧಾನವೇ ಹೊರತು ಅದರ ಯೌಗಿಕಾರ್ಥವಲ್ಲ. ಈ ತತ್ತ್ವದ ಪ್ರಕಾರ ಪ್ರಾಣಿಗಳಿಂದ ನಡೆಸುವ ವಾಹನವನ್ನು ಕೃಷಿ ಉಪಕರಣವೆಂದು ಪರಿಗಣಿಸಲಾಗದು ಎಂದು ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ.

ಮೀಮಾಂಸಾಶಾಸ್ತ್ರದ ಮೂಲ ಕರ್ತೃ ಜೈಮಿನಿ ಋಷಿ. ಶಬರ ಋಷಿ, ಕುಮಾರಿಲ ಭಟ್ಟ, ಪ್ರಭಾಕರ ಮೊದಲಾದವರು ಜೈಮಿನಿಯ ಸೂತ್ರಗಳಿಗೆ ವ್ಯಾಖ್ಯಾನ ಬರೆದಿದ್ದಾರೆ. ಮೀಮಾಂಸಾತತ್ತ್ವಗಳನ್ನು ವಿಜ್ಞಾನೇಶ್ವರ, ಜೀಮೂತವಾಹನ, ನಂದಪಂಡಿತ ಮುಂತಾದ ಪ್ರಖ್ಯಾತ ನ್ಯಾಯಶಾಸ್ತ್ರಜ್ಞರು ಉಪಯೋಗಿಸಿಕೊಂಡಿದ್ದಾರೆ ಎಂಬ ಅಂಶವನ್ನೂ ನ್ಯಾಯಮೂರ್ತಿಗಳಾದ ಶ್ರೀ ಎ.ಕೆ. ಮಾಥೂರ್ ಮತ್ತು ಮಾರ್ಕಂಡೇಯ ಕಾಟ್ಜು ಅವರು ತಮ್ಮ ತೀರ್ಪಿನಲ್ಲಿ ಪ್ರಸ್ತಾಪಿಸಿದ್ದಾರೆ. **ಹಿತ್ತಲ ಗಿಡ ಮದ್ದಲ್ಲ ಎನ್ನುವ ಗಾದೆ ಈಗಲಾದರೂ ಸುಳ್ಳಾಯಿತಲ್ಲ, ಅದೇ ಸಂತೋಷ. ('ಹಿಂದೂ ಪತ್ರಿಕೆ', ಡಿಸೆಂಬರ್ ೧೧, ೨೦೦೭)**

## ಆಶ್ರಮದ ಕಾರ್ಯಕ್ರಮಗಳು

### ಫೆಬ್ರವರಿ 2008

| | | |
|---|---|---|
| 2 | ಶನಿವಾರ | ಏಕಾದಶಿ |
| 9 | ಶನಿವಾರ | ಸ್ವಾಮಿ ಬ್ರಹ್ಮಾನಂದ ಜಯಂತಿ |
| 10 | ಭಾನುವಾರ | ಸ್ವಾಮಿ ತ್ರಿಗುಣಾತೀತಾನಂದ ಜಯಂತಿ |
| 17 | ಭಾನುವಾರ | ಏಕಾದಶಿ |
| 21 | ಗುರುವಾರ | ಸ್ವಾಮಿ ಅದ್ಭುತಾನಂದ ಜಯಂತಿ |

ಮೈಸೂರು ಆಶ್ರಮದ ಸಭಾಂಗಣದಲ್ಲಿ ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6 ರಿಂದ 7 ರವರೆಗೆ ಪ್ರವಚನಗಳು ಇರುತ್ತವೆ. ಪ್ರತಿದಿನ ಸಂಜೆ 7 ರಿಂದ 7.35 ರವರೆಗೆ ಸಂಜೆಯ ಆರತಿ ಮತ್ತು ಭಜನೆಗಳು ಇರುತ್ತವೆ. ವಿಶೇಷದಿನಗಳ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ.